**ದಿನಾಂಕಃ 27.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ವಾದಿಯ ಪರ ವಕೀಲರಿಂದಃ**

1. ರಿಪ್ಲೇ ನೋಟೀಸ್, ಪ್ರತಿವಾದ ಪತ್ರ ಹಾಗೂ ಸಾಕ್ಷಿ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ ಎಂದರೆ ಸರಿ. ನಾನು, ಚನ್ನಯ್ಯ ಮತ್ತು ಅವರ ಒಡನಾಡಿಗಳು 4 ಜನ ಎನ್.ಎ ಮಾಡಿಸಲು ಒಡಂಬಡಿಕೆ ಮಾಡಿಕೊಂಡಿದ್ದೆವು ಎಂದರೆ ನಾನು ಮತ್ತು ಚನ್ನಯ್ಯ ಮಾತ್ರ ಒಡಂಬಡಿಕೆ ಮಾಡಿಕೊಂಡಿದ್ದೆವು. ಡೆವಲಪ್ಮೆಂಟ್ ಮಾಡಿದ ನಂತರ ಪ್ಲಾಟುಗಳನ್ನು ಮಾರಾಟ ಮಾಡುವ ಉದ್ದೇಶಕ್ಕಾಗಿ ಕಾವೇರಿ ಡೆವಲಪರ್ಸ್ ಎಂಬ ಹೆಸರನ್ನು ಇಟ್ಟುಕೊಂಡಿದ್ದೆವು ಎಂದರೆ ಜಿಲ್ಲಾಧಿಕಾರಿಗಳ ಅನುಮತಿ ಮಾತ್ರ ಕೇಳಿದ್ದೆವು , ಯಾವುದೇ ಹೆಸರನ್ನು ಇಟ್ಟಿರಲಿಲ್ಲ. ಚನ್ನಯ್ಯ , ನಾನು ಮತ್ತು 4 ರಿಂದ 6 ನೇ ವಾದಿಗಳು ಪಾಂಪ್ಲೇಟ್ಸ್ ಕೂಡಾ ತಯಾರಿಸಿ ಹಂಚಿಕೆ ಮಾಡಿದ್ದೆವು ಎಂದರೆ ಸರಿಯಲ್ಲ. 2016 ರಲ್ಲಿ ನಾನು ಚನ್ನಯ್ಯ ಮತ್ತು 4 ರಿಂದ 6 ನೇ ವಾದಿಗಳ ಜೊತೆ ಒಡಂಬಡಿಕೆ ಮತ್ತು 2018 ರಲ್ಲಿ ಅವರ ಜೊತೆ ಜಾಯಿಂಟ್ ಡೆವಲ್ಮೆಂಟ್ ಅಗ್ರೀಮೆಂಟ್ ಮಾಡಿಕೊಂಡಿದ್ದೆ ಎಂದರೆ 2016 ರಲ್ಲಿ ಒಡಂಬಡಿಕೆ ಮಾತ್ರ ಮಾಡಿಕೊಂಡಿದ್ದೆ . ನಾವು ನಿವೇಶನಗಳನ್ನು ಕಂತುಗಳಲ್ಲಿ ಹಣ ಪಾವತಿ ಮಾಡುವ ಮೂಲಕ ಗ್ರಾಹಕರು ಖರೀದಿ ಮಾಡಬಹುದು ಎಂದು ಒಡಂಬಡಿಕೆ ಮಾಡಿಕೊಂಡಿದ್ದೆವು ಎಂದರೆ ಸರಿಯಲ್ಲ. ಅದರ ಪ್ರಕಾರ ಕೆಲವು ಗ್ರಾಹಕರಿಂದ ಕಂತುಗಳ ಹಣ ಸ್ವೀಕರಿಸಿ ನಾನು ಮತ್ತು ವಾದಿಗಳು ಗ್ರಾಹಕರಿಗೆ ಕರಾರುಗಳನ್ನು ಕೂಡಾ ಬರೆದು ಕೊಟ್ಟಿದ್ದೆವು ಎಂದರೆ ಸರಿಯಲ್ಲ. ನಾನು ಡ್ರಿಪ್ ಇರಿಗೇಶನ್ ಏಜೆಂಟ್ ಆಗಿದ್ದರಿಂದ ವಾದಿಗಳಿಗೆ ಪರಿಚಯವಾಗಿದ್ದೆ ಎಂದರೆ ಸರಿಯಲ್ಲ, ನಾನು ಹೇಳುತ್ತೇನೆ, ಚನ್ನಯ್ಯನವರೇ ನನ್ನ ಬಳಿಗೆ ರಿಯಲ್ ಎಸ್ಟೇಟ್ ಮಾಡುವುದಾಗಿ ಮತ್ತು ಎನ್.ಎ ಮಾಡಿಸಿ ಕೊಡುವುದಾಗಿ ಹೇಳಿಕೊಂಡು ಬಂದಿದ್ದರು.

2. ಚನ್ನಯ್ಯ ಮತ್ತು 4 ರಿಂದ 6 ನೇ ವಾದಿಗಳು ನನ್ನ ಬಳಿ ಬಂದು ಎನ್.ಎ ಮಾಡಿಸಿಕೊಟ್ಟು ನಿವೇಶನಗಳ ರಚನೆಗೆ ಅಭಿವೃದ್ಧಿ ಮಾಡಿಸಿ ಕೊಡುವುದಾಗಿ ಹೇಳಿದ್ದು, ನನಗೆ ಒಪ್ಪಿಗೆಯಾದ ನಂತರವೇ ಒಡಂಬಡಿಕೆ ಮಾಡಿಕೊಂಡಿದ್ದರು ಎಂದರೆ ನನ್ನ ಬಳಿಗೆ ಚನ್ನಯ್ಯ ಮಾತ್ರ ಬಂದಿದ್ದರು, ಅವರ ಪ್ರಸ್ತಾವನೆಯು ನನಗೆ ಒಪ್ಪಿಗೆಯಾಗಿದ್ದರಿಂದ ಅವರ ಜೊತೆ ಒಡಂಬಡಿಕೆ ಮಾಡಿಕೊಂಡೆ. ಒಡಂಬಡಿಕೆ ಪತ್ರದಲ್ಲಿ ವಾದಿಗಳು ಮೊದಲ ಪಕ್ಷಕಾರರು ಹಾಗೂ ನಾನು 2 ನೇ ಪಕ್ಷಕಾರ ಎಂದು ಸಹಿ ಮಾಡಿದ್ದೇನೆ ಎಂದರೆ ಸರಿ. ಚನ್ನಯ್ಯ ಮತ್ತು 4 ರಿಂದ 6 ನೇ ವಾದಿಗಳು ನನ್ನನ್ನು ಸಂಪರ್ಕಿಸುವ ಕಾಲಕ್ಕೆ ನನ್ನ ಜಮೀನಿನ ಮೇಲೆ ಯಾವುದಾದರೂ ಬ್ಯಾಂಕ್ ಸಾಲ ಅಥವಾ ಖಾಸಗಿ ಅಡಮಾನ ಇತ್ತೇ? ಎಂದರೆ ಇರಲಿಲ್ಲ. ಆ ಸಂದರ್ಭದಲ್ಲಿ ನನ್ನ ಜಮೀನಿನ ಮೇಲೆ ಯಾವುದೇ ರುಣಭಾರಗಳು ಇರಲಿಲ್ಲವೆಂದು ರುಜುವಾತುಪಡಿಸುವ ರುಣಭಾರ ಪ್ರಮಾಣ ಪತ್ರ ತಂದು ಹಾಜರು ಮಾಡಲು ನನಗೆ ತೊಂದರೆ ಇಲ್ಲ ಎಂದರೆ ಸರಿ. ಮುಂದಿನ ದಿನಾಂಕದಂದು ರುಣಭಾರ ಪ್ರಮಾಣ ಪತ್ರ ಹಾಜರು ಮಾಡುತ್ತೀರಾ? ಎಂದರೆ 2016 ನೇ ಇಸವಿಗಿಂತ ಮುಂಚೆಯೇ ನನ್ನ ಆಸ್ತಿಯ ಮೇಲೆ ಓರಿಯಂಟಲ್ ಬ್ಯಾಂಕ್ ಮತ್ತು ಕೃಷಿ ಸೊಸೈಟಿಯಿಂದ ನಾನು ಕೃಷಿ ಸಾಲಗಳನ್ನು ಪಡೆದಿದ್ದೆ. ರಾಮಾ ನಾಯ್ಕ ಎಂಬ ಖಾಸಗಿ ವ್ಯಕ್ತಿಯಿಂದಲೂ ನಾನು ಸಾಲ ಪಡೆದು ಅವರಿಗೆ ಅಡಮಾನ ಪತ್ರ ಬರೆದುಕೊಟ್ಟಿದ್ದೆ ಎಂದರೆ ಸರಿ . ಈ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮನೆ ರಿಪೇರಿ ಖರ್ಚು ಎಂದು ಹೇಳಿ ವಾದಿಗಳಿಂದ ನಾನು ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ. ನಾನು ಬ್ಯಾಂಕ್, ಸೊಸೈಟಿ, ರಾಮಾ ನಾಯ್ಕ ಇವರಿಂದ ಪಡೆದ ಸಾಲಗಳನ್ನು ತೀರಿಸಲು, ಮನೆ ರಿಪೇರಿ ಖರ್ಚಿಗಾಗಿ ಹಾಗೂ ಜಮೀನಿನ ಅಭಿವೃದ್ಧಿ ವೆಚ್ಚ

ಇವೆಲ್ಲವುಗಳಿಗಾಗಿ ಚನ್ನಯ್ಯ ಹಾಗೂ 4 ರಿಂದ 6ನೇ ವಾದಿಗಳಿಂದ ರೂ. 29 ಲಕ್ಷ ಮೊತ್ತವನ್ನು ಪಡೆದುಕೊಂಡಿದ್ದೆ ಎಂದರೆ ನಾನು ಚನ್ನಯ್ಯನವರಿಂದ ರೂ. 20 ಲಕ್ಷ ಮಾತ್ರ ಸೆಕ್ಯೂರಿಟಿ ಡೆಪಾಸಿಟ್ ಆಗಿ ಹಣ ಪಡೆದಿದ್ದೆ. ನಾನು ಸ್ವತಃ ಹೇಳುತ್ತೇನೆ, 2017-18ರಲ್ಲಿ ಚನ್ನಯ್ಯ ನನಗೆ ನೋಟೀಸ್ ಕೊಟ್ಟ ನಂತರ ಚನ್ನಯ್ಯನಿಗೆ ರಿಪ್ಲೇ ನೋಟೀಸ್ ನೀಡಿ ನೀವು ಎನ್.ಎ ಮಾಡಿಸಿಲ್ಲವಾದ್ದರಿಂದ ನಿಮ್ಮ ರೂ.20 ಲಕ್ಷ ಸೆಕ್ಯೂರಿಟಿ ಡೆಪಾಸಿಟ್ ಮೊತ್ತವನ್ನು ವಾಪಸ್ಸು ಪಡೆದುಕೊಳ್ಳಿ ಎಂದು ತಿಳಿಸಿದ್ದೆ.

3. ನಾನು ಚನ್ನಯ್ಯ ಮತ್ತು 4 ರಿಂದ 6ನೇ ವಾದಿಗಳ ಜೊತೆ ನನ್ನ 8 ಎಕರೆ 34 ಸೆಂಟ್ಸ್ ಪೈಕಿ 8 ಎಕರೆಯ ಎನ್.ಎ ಮಾಡಿಸಿ ಪ್ಲಾಟ್ ಮಾರಾಟ ಮಾಡುವ ಒಡಂಬಡಿಕೆ ಮಾಡಿಕೊಂಡ ನಂತರ ಸದರಿ ಅಗ್ರೀಮೆಂಟ್ ರದ್ದು ಪಡಿಸದೇ ಬೇರೆ ಯಾರ ಜೊತೆಯಾದರೂ ಬೇರೆ ಅಗ್ರೀಮೆಂಟ್ ಗಳನ್ನು ಮಾಡಿಕೊಂಡಿದ್ದುಂಟೇ? ಎಂದರೆ ಮಾಡಿಕೊಂಡಿಲ್ಲ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ